**ದಿನಾಂಕಃ 24.05.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಎಂ ಬಿ ವಕೀಲರಿಂದಃ-</u>**

ನನ್ನ ಆಸ್ತಿಯ ಪೂರ್ವ ಭಾಗದಲ್ಲಿ ದೇವೇಂದ್ರಪ್ಪ ರವರ ಆಸ್ತಿ ಇದೆ. ದೇವೇಂದ್ರಪ್ಪ ರವರ ಆಸ್ತಿಯ ಸಂಖ್ಯೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವ ಭಾಗಕ್ಕೆ ವಾದಿಯ ಸ್ವತ್ತು ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿ ಸ್ವಾದೀನ ಇದ್ದಾರೆ ಎಂದರೆ ಸರಿ. ನನ್ನ ತಾತ ಸರ್ಕಾರದ ವಿರುದ್ದ ದಾವೆಯನ್ನು ಸಲ್ಲಿಸಿದ್ದರು. ಸರ್ಕಾರದವರು ಸರ್ಕಾರದ ಆಸ್ತಿಯನ್ನು ನಮ್ಮ ತಾತ ಒತ್ತುವರಿ ಮಾಡಿದ್ದಾರೆ ಎಂದು ನೋಟಿಸು ನೀಡಿದ್ದು ಅದನ್ನು ಪ್ರಶ್ನಿಸಿ ದಾವೆ ಸಲ್ಲಿಸಿದ್ದರು, ಸದರಿ ದಾವೆ ವಜಾ ಅಗಿರುತ್ತದೆ. ನಮ್ಮ ಸ್ವತ್ತಿನ ಪೂರ್ವ ಭಾಗದಲ್ಲಿ ನಾವು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-11 ರ ಬಾವಚಿತ್ರದಲ್ಲಿ ಕಾಣುವ ಅಂಗಡಿ ಮಳಿಗೆಗಳು ನಮಗೆ ಸೇರಿರುತ್ತವೆ. ದಾವಾ ಸ್ವತ್ತಿನ ಪೂರ್ವ ಭಾಗದಲ್ಲಿ ವಾದಿಗೆ ಸೇರಿದ ಮನೆ ಇದೆ ಎಂದರೆ ಸರಿ. ನಾವು ನಿರ್ಮಿಸಿರುವ ಮೆಟ್ಟಿಲು ಜಾಗ ವಾದಿಗೆ ಸೇರಿದ ಸ್ವತ್ತಿನಲ್ಲಿದೆ ಎಂದರೆ ಸರಿಯಲ್ಲ. ನಾವು ನಿರ್ಮಿಸಿರುವ ಮೇಲ್ಚಾವಣಿಯಿಂದ ಮಳೆಗಾಲದಲ್ಲಿ ನೀರು ಬಂದು ವಾದಿಯ ಜಾಗದಲ್ಲಿ ಬೀಳುತ್ತದೆ ಎಂದರೆ ಸರಿಯಲ್ಲ. ವಾದಿಯ ಅನುಪಸ್ಥಿತಿಯಲ್ಲಿ ನಾವು ವಾದಿಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿ ಮೆಟ್ಟಿಲುಗಳನ್ನು ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರು ಪ್ರಶ್ನೆ ಮಾಡಿದ್ದರಿಂದ ನಾವು ಮೆಟ್ಟಿಲುಗಳನ್ನು ನಿರ್ಮಾಣ ಮಾಡುವುದನ್ನು ನಿಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ನಮ್ಮ ವಿರುದ್ದ ಪೋಲಿಸ್ ದೂರು ದಾಖಲು ಮಾಡಿರುತ್ತಾರೆ ಎಂದರೆ ಸರಿ. ಮೇಲ್ಚಾವಣಿ ಮತ್ತು ಮೆಟ್ಟಿಲುಗಳನ್ನು ವಾದಿಯ ಜಾಗದಲ್ಲಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ನೀಡುವ ಸಲುವಾಗಿ ವಾದಿಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ವಾಸವಾಗಿರುವ ಮನೆಯ ಮುಂಭಾಗದಲ್ಲಿ ಪೆಟ್ಟಿಗೆ ಅಂಗಡಿ ಇದೆ ಎಂದರೆ ಸರಿ. ಪೆಟ್ಟಿಗೆ ಅಂಗಡಿಯ ಪಶ್ಚಿಮ ಭಾಗದಲ್ಲಿ 6.5 ಅಡಿ ಜಾಗ ನಿಪಿ-11 ರ ಬಾವಚಿತ್ರದಲ್ಲಿ ಕಾಣಿಸುತ್ತಿದೆ ಎಂದರೆ ಸರಿ. ನಾವು ನಿರ್ಮಾಣ ಮಾಡಿರುವ ಮೆಟ್ಟಿಲುಗಳ ಜಾಗ ನಮಗೆ ಸೇರಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಅಜ್ಜಿ ಸುಮಿತ್ರಮ್ಮ ರವರಿಂದ ಆಸ್ತಿಯನ್ನು

ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯು ರಸ್ತೆಯ ಎಡಭಾಗದಲ್ಲಿ ಬರುತ್ತದೆ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.